ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳು examination time ಆಗಿದೆ. ನಮ್ಮ ಮಕ್ಕಳು ಓದುತ್ತಿರುವಾಗ ದಿಢೀರ್ ಎಂದು ಲೋಡ್‌ಶೆಡ್ಡಿಂಗ್ ಆಗುತ್ತದೆ. ಪುನಃ 2 ಗಂಟೆ ಅವಧಿಯವರೆಗೂ ಕರೆಂಟ್ ಬರುವುದಿಲ್ಲ. ಇದಕ್ಕೆ ಏನಾದರೂ Time Table ಇದೆಯೇ? Examination timeನಲ್ಲಿ ಲೋಡ್‌ಶೆಡ್ಡಿಂಗ್ ಆಗುವುದಿಲ್ಲ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳಿಕೆ ಅಥವಾ ಆಶ್ವಾಸನೆ ಕೊಡುತ್ತಾರಾ? ಇಲ್ಲವೆಂದರೆ day timeನಲ್ಲಿ ಲೋಡ್‌ಶೆಡ್ಡಿಂಗ್ ಆಗುತ್ತದೆ, ಸಾಯಂಕಾಲದಲ್ಲಿ ಆಗುವುದಿಲ್ಲ ಎಂದು ಏನಾದರೂ assurance ಕೊಡುತ್ತಾರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಈಗಾಗಲೇ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಪರೀಕ್ಷೆ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಆ ದಿಕ್ಕಿನಲ್ಲಿ ಗಮನಿಸುತ್ತೇವೆ. ಕರ್ನಾಟಕ ರಾಜ್ಯದಲ್ಲಿ ಪರೀಕ್ಷಾ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎನ್ನುವಂತಹ ಭರವಸೆಯನ್ನು ಕೊಡಬಯಸುತ್ತೇನೆ.

ಅಧ್ಯಕ್ಷರು : ಈ ಪ್ರಶ್ನೆ ಮುಕ್ತಾಯವಾಗಿದೆ. ಮಾನ್ಯ ಬಗಲಿಯವರೆ, ತಮ್ಮ ಪ್ರಶ್ನೆಗೆ ಉತ್ತರಿಸಲು ಮಾನ್ಯ ಸಚಿವರು ಕಾಲಾವಕಾಶ ಕೋರಿದ್ದಾರೆ. ಮುಂದಿನ ವಾರ ಅದಕ್ಕೆ ಉತ್ತರ ಕೊಡಿಸೋಣ.

ಗುಲ್ಬರ್ಗಾ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ :

627 ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ (ಅಫ್ಜಲ್‌ಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಅಫ್ಜಲ್‌ಪುರ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದ್ದು, ಯಾವ ಯಾವ ಯೋಜನೆಯಲ್ಲಿ ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು?

ಆ) ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಅಫಜಲಪುರ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಖೆಯ ಕೆಳಕಂಡ ಯೋಜನೆಗಳಲ್ಲಿ ರಸ್ತೆ ಮತ್ತು ಸೇತುವೆ, ಕಟ್ಟಡ, ಕುಡಿಯುವ ನೀರು ಸರಬರಾಜು ಹಾಗೂ ಸಣ್ಣ ನೀರಾವರಿ ಕೆರೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

1. ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ–ಲೆ.ಶೀ–3054
2. ಗ್ರಾಮೀಣ ಸಂಪರ್ಕ –ವಿಶೇಷ ಅಭಿವೃದ್ಧಿ ಯೋಜನೆ–ಲೆ. ಶೀ–5054
3. ಗ್ರಾಮೀಣ ಸಂಪರ್ಕ (ಸಾಮಾನ್ಯ)–ವಿಶೇಷ ಅಭಿವೃದ್ಧಿ ಯೋಜನೆ–ಲೆ.ಶೀ–5054
4. ಗ್ರಾಮೀಣ ಸಂಪರ್ಕ–ವಿಶೇಷ ಅಭಿವೃದ್ಧಿ–ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ
5. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ
6. 12ನೇ ಹಣಕಾಸು ಆಯೋಗ ಯೋಜನೆ–ರಸ್ತೆ ಮತ್ತು ಕಟ್ಟಡ ನಿರ್ವಹಣೆ
7. ಸಣ್ಣ ನೀರಾವರಿ ಕೆರೆ–ವಿಶೇಷ ಅಭಿವೃದ್ಧಿ ಯೋಜನೆ
8. ಕುಡಿಯುವ ನೀರಿನ ಯೋಜನೆಗಳು–ಸಾಮಾನ್ಯ ಹಾಗೂ ವಿಶೇಷ ಅಭಿವೃದ್ಧಿ ಯೋಜನೆ
9. ಗ್ರಾಮ ಸ್ವರಾಜ್ –ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆ.

ಆ) ಅತ್ಯಂತ ಹಿಂದುಳಿದ ಅಫಜಲಪುರ ತಾಲ್ಲೂಕಿನ ರಸ್ತೆ ಮತ್ತು ಸೇತುವೆ, ಕಟ್ಟಡ ನಿರ್ವಹಣೆ, ಕುಡಿಯುವ ನೀರು ಸರಬರಾಜು ಹಾಗೂ ಸಣ್ಣ ನೀರಾವರಿ ಕೆರೆ ಅಭಿವೃದ್ಧಿಗಾಗಿ ಹಾಗೂ ಗ್ರಾಮ ಸ್ವರಾಜ್ ಕಾರ್ಯಕ್ರಮದಡಿ ಪ್ರಸ್ತುತ 2009–10ನೇ ಸಾಲಿನಲ್ಲಿ ಕೆಳಕಂಡ ಯೋಜನೆಗಳಡಿ ಅನುದಾನ ಹಂಚಿಕೆಯಾಗಿದ್ದು, ಅದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸ ಲಾಗುತ್ತಿದೆ.

ಕ್ರ. ಸಂ.	ಯೋಜನೆ	ಅಫಜಲಪುರ ತಾ:ಗೆ ಒದಗಿಸಿದ ಅನುದಾನ (ರೂ.ಲಕ್ಷಗಳಲ್ಲಿ)
1	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಲೆ.ಶೀ–3054 ಹೆಚ್ಚುವರಿ ಅನುದಾನ	ಜಿ.ಪಂ.ನಿಂದ ಅನುದಾನ ಹಂಚಿಕೆ ಆಗುತ್ತದೆ 20.00
2	ಗ್ರಾಮೀಣ ಸಂಪರ್ಕ–ವಿ.ಅ.ಯೋ ಲೆ.ಶೀ–5054	24.48
3	ಗ್ರಾಮೀಣ ಸಂಪರ್ಕ (ಸಾಮಾನ್ಯ)–ವಿ ಅ.ಲೆ.ಶೀ–5054 ಹೆಚ್ಚುವರಿ ಅನುದಾನ	244.87 50.00
4	ಗ್ರಾಮೀಣ ಸಂಪರ್ಕ–ವಿಶೇಷ ಅಭಿವೃದ್ಧಿ–ವಿಶೇಷ ಘಟಕ ಯೋಜನೆ ಗಿರಿಜನ ಉಪಯೋಜನೆ	5.90 13.49
5	12ನೇ ಹಣಕಾಸು ಆಯೋಗ ಯೋಜನೆ ಜಿ.ಪಂ/ತಾ.ಪಂ. ಕಟ್ಟಡ ನಿರ್ವಹಣೆ	10.86
6	ಸಣ್ಣ ನೀರಾವರಿ ಕೆರೆಗಳು –ವಿಶೇಷ ಅಭಿವೃದ್ಧಿ	77.35
7	ಕುಡಿಯುವ ನೀರಿನ ಯೋಜನೆಗಳು (ಕೇಂದ್ರ+ರಾಜ್ಯ) ಸಾಮಾನ್ಯ	189.87
8	ಕುಡಿಯುವ ನೀರಿನ ವಿಶೇಷ ಅಭಿವೃದ್ಧಿ ಯೋಜನೆ ಸಾಮಾನ್ಯ ವಿಶೇಷ ಘಟಕ ಯೋಜನೆ ಗಿರಿಜನ ಉಪ ಯೋಜನೆ	60.89 35.73 17.86
9	ಗ್ರಾಮಸ್ವರಾಜ್ –ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆ	63.00

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಅಫಜಲ್‌ಪುರ ತಾಲ್ಲೂಕಿನಲ್ಲಿ ಈವರೆಗೆ 119.48 ಕಿ.ಮೀ. ಉದ್ದದ 10 ರಸ್ತೆ ಕಾಮಗಾರಿಗಳನ್ನು ರೂ.24.94 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರ ಸಮರ್ಪಕವಾಗಿದೆ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಸುಮ್ಮನೆ ಟೈಮ್‌ವೇಸ್ಟ್ ಮಾಡುವುದು ಬೇಡ. ಆದರೆ ಒಂದೇ ಒಂದು clarification ಕೇಳಬಯಸುತ್ತೇನೆ. ಯಾವ್ಯಾವ ಕಾಮಗಾರಿಗಳಿಗೆ ಯಾವಾಗ ಟೆಂಡರ್ ಕರೆಯಲಾಗಿದೆ? ಅವುಗಳು ಯಾವಾಗ ಮುಗಿಯುತ್ತವೆ? ಎಂಬ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಮಾಹಿತಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತರ ಸಮರ್ಪಕವಾಗಿದೆ ಎಂದು ಹೇಳಿದರು. ಟೆಂಡರ್ ಅನ್ನು ಕೆಳಗಿನ ಹಂತದಲ್ಲಿ ಕರೆದಿರುತ್ತಾರೆ. ಅದರ ಪ್ರತಿಯೊಂದು details ನಮಗೆ ಬಂದಿರುವುದಿಲ್ಲ. ಆ ಮಾಹಿತಿಯನ್ನು ಸಂಬಂಧಪಟ್ಟವರಿಂದ ಪಡೆದುಕೊಂಡು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಮುಂದಿನ ಪ್ರಶ್ನೆ ಮಾನ್ಯ ತುಕಾರಾಮ್‌ರವರದು.

ಸಂಡೂರು ತಾಲ್ಲೂಕಿನಲ್ಲಿ ಖಾಲಿ ಇರುವ ಪಶು ವೈದ್ಯಾಧಿಕಾರಿಗಳ ಬಗ್ಗೆ :

120 (800) ಶ್ರೀ ತುಕಾರಾಮ್.ಇ (ಸಂಡೂರ್) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕಿನಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವುನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು) :

ಅ) ಹೌದು

ಆ) ವಿಶೇಷ ನೇಮಕಾತಿ ನಿಯಮ ರಚಿಸಿ, ಆ ಮೂಲಕ ಪಶುವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ